ಅ) ತರೀಕೆರೆ ತಾಲ್ಲೂಕಿನಲ್ಲಿ ಬಗರ್ ಹುಕುಂ ಸಾಗುವಳಿಗಾಗಿ ಎಷ್ಟು ಅರ್ಜಿಗಳು ವಿಲೇವಾರಿಯಾಗದೆ ಬಾಕಿ ಉಳಿದಿರುತ್ತವೆ,

ಆ) ತರೀಕೆರೆ ತಾಲ್ಲೂಕಿನಲ್ಲಿ ಬಗರ್‌ಹುಕುಂ ಸಾಗುವಳಿ ಅರ್ಜಿದಾರರು ಸಲ್ಲಿಸಿರುವ ಅರ್ಜಿಗಳು ಇನ್ನೂ ಎಷ್ಟು ಬಾಕಿ ಇರುತ್ತವೆ ಹಾಗೂ ಸರ್ಕಾರದ ವತಿಯಿಂದ ಬಗರ್‌ಹುಕುಂ ಸಮಿತಿಯನ್ನು ನೇಮಕ ಮಾಡಲಾಗಿದೆಯೇ,

ಇ) ಮಾಡದಿದ್ದಲ್ಲಿ, ತರೀಕೆರೆ ತಾಲ್ಲೂಕಿನಲ್ಲಿ ಬಗರ್‌ಹುಕುಂ ಸಮಿತಿ ನೇಮಕ ಮಾಡಲು ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳುವುದೇ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ತರೀಕೆರೆ ತಾಲ್ಲೂಕಿನಲ್ಲಿ ಸರ್ಕಾರಿ ಜಮೀನು ಬಗರ್ ಹುಕುಂ ಸಾಗುವಳಿ ಸಕ್ರಮಗೊಳಿಸಲು ನಮೂನೆ 50ರಲ್ಲಿ ಒಟ್ಟು 12856 ಅರ್ಜಿಗಳು ಸ್ವೀಕೃತವಾಗಿದ್ದು, ಪೂರ್ಣವಾಗಿ ವಿಲೇವಾರಿಯಾಗಿರುತ್ತದೆ ನಮೂನೆ 53ರಲ್ಲಿ 17288 ಅರ್ಜಿಗಳು ಸ್ವೀಕೃತವಾಗಿದ್ದು, 5274 ಅರ್ಜಿಗಳು ವಿಲೇವಾರಿಗೆ ಬಾಕಿ ಇರುತ್ತವೆ

ಆ) ತರೀಕೆರೆ ತಾಲ್ಲೂಕಿನಲ್ಲಿ ಬಗರ್ ಹುಕುಂ ಸಾಗುವಳಿ ಸಕ್ರಮವಾಗಿ ಸಲ್ಲಿಸಿರುವ ನಮೂನೆ 53ರ ಒಟ್ಟು 5274 ಅರ್ಜಿಗಳು ವಿಲೇವಾರಿಗೆ ಬಾಕಿಯಿರುತ್ತವೆ ಪ್ರಸ್ತುತ ಬಗರ್ ಹುಕುಂ ಸಾಗುವಳಿ ಸಕ್ರಮ ಸಮಿತಿಯು ಪುನರ್ ರಚನೆಯಾಗಿರುವುದಿಲ್ಲ

ಇ) ಹೌದು ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ

846(1299) ಶ್ರೀ ಸಿದ್ದುಸವದಿ (ಜಮಖಂಡಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ಸಾರ್ವಜನಿಕರ ಸೌಕರ್ಯಗಳಿಗಾಗಿ ಖಾಸಗಿ ಮಾಲೀಕರ ಜಮೀನುಗಳನ್ನು ಖರೀದಿಸಲು (ಸ್ವಾಧೀನಪಡಿಸಿಕೊಳ್ಳಲು) ಪ್ರತಿ ಎಕರೆಗೆ ಸರ್ಕಾರ ನಿಗಧಿಗೊಳಿಸಿರುವ ಮೊತ್ತ ಎಷ್ಟು ,

ಆ) ಇತ್ತೀಚಿನ ದಿನಗಳಲ್ಲಿ ಭೂಮಿಯ ಬೆಲೆ ಗಗನಕ್ಕೆ ಏರಿರುವಾಗ ಸರ್ಕಾರ ನಿಗಧಿಪಡಿಸಿರುವ ಬೆಲೆ ಅತಿ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಹಾಗಿದ್ದಲ್ಲಿ, ಈಗಿರುವ ಬೆಲೆಯನ್ನು ಪರಿಷ್ಕರಿಸಲಾಗುವುದೇ, ಹಾಗಿದ್ದಲ್ಲಿ, ಎಂದಿನಿಂದ ಪರಿಷ್ಕರಿಸಲಾಗುವುದು,

ಈ) ಈ ಭೂಮಿಯ ಬೆಲೆಯನ್ನು ತಕ್ಷಣ ಹೆಚ್ಚಿಸದಿದ್ದಲ್ಲಿ ಅಥವಾ ಪ್ರಸ್ತುತ ಬೆಲೆಯಲ್ಲಿ ಖರೀದಿಸದೇ ಹೋದಲ್ಲಿ ಜಮೀನುಗಳು ಸಿಗುವುದಿಲ್ಲದಿರುವುದು ಸರ್ಕಾರದ ಗಮನದಲ್ಲಿದೆಯೇ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಸಾರ್ವಜನಿಕ ಉದ್ದೇಶಗಳಿಗಾಗಿ ಖಾಸಗಿ ಜಮೀನನ್ನು ಭೂಸ್ವಾಧೀನ ಕಾಯ್ದೆ 1894ರ ಅಡಿಯಲ್ಲಿ ಸ್ವಾಧೀನಪಡಿಸಿಕೊಳ್ಳಲಾಗುತ್ತದೆ ಈ ಕಾಯ್ದೆಯನ್ವಯ ಜಮೀನಿನ ಬೆಲೆಯನ್ನು ಪೂರ್ವಭಾವಿಯಾಗಿ ನಿಗಧಿಪಡಿಸಲು ಅವಕಾಶವಿಲ್ಲ

ಆ) ಬಂದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

847(1300) ಶ್ರೀ ಸಿದ್ದು ಸವದಿ (ಜಮಖಂಡಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನಗಳಿಗ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದ ಕೆಹೆಚ್‌ಡಿಸಿಯಲ್ಲಿ ಕೆಲಸ ಮಾಡುವ ಕೈಮಗ್ಗ ನೇಕಾರರ ಜೀವನ ಸ್ಥಿತಿ ಅತ್ಯಂತ ಕಷ್ಟಕರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಿಂದಿನ ವರ್ಷ ಸರ್ಕಾರ ನೇಕಾರರಿಗೆ ನೀಡಲಾಗಿದ್ದ ಸಾಲ ಮನ್ನಾ, ಬಡ್ಡಿ ಮನ್ನಾ ಮತ್ತು ವಿದ್ಯುತ್ ರಿಯಾಯಿತಿಯಂತಹ ಯಾವ ಸೌಲಭ್ಯಗಳಲ್ಲಿಯೂ ಸದರೀ ನೇಕಾರರಿಗೆ ಯಾವ ರೀತಿಯ ಸಹಾಯ ದೊರೆತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಇ) ಹಾಗಿದ್ದಲ್ಲಿ, ಸರ್ಕಾರದ ಎಲ್ಲಾ ಯೋಜನೆಗಳು ಕೇವಲ ಶ್ರೀಮಂತರಿಗಾಗಿಯೇ ಇವೆಯೇ , ಹಾಗಿಲ್ಲದಿದ್ದಲ್ಲಿ, ಕೈಮಗ್ಗ ನೇಕಾರರಿಗೆ ಏಕೆ ಈ ಸೌಲಭ್ಯ ದೊರೆತಿರುವುದಿಲ್ಲ ,

ಈ) ಯಾವುದೇ ಸಂಘ ಅಥವಾ ಬ್ಯಾಂಕಿನವರು ಈ ಬಡವರಿಗೆ ಸಾಲ ಕೊಡಲು ಮುಂದೆ ಬರದಿಲ್ಲದಿರುವುದು ನಿಜವೇ ,

ಉ) ಬಂದಿದ್ದಲ್ಲಿ, ಇವರ ಗೃಹ ಸಾಲವನ್ನಾದರೂ ಮನ್ನಾ ಮಾಡಬೇಕೆಂದು ಬಂದಿರುವ ಬೇಡಿಕೆ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಅಪ್ಪಾಸಾಹೇಬ ಮಲ್ಲಪ್ಪ ಪಟ್ಟಣಶೆಟ್ಟಿ (ಜವಳಿ ಸಚಿವರು)

ಅ) ರಾಜ್ಯದ ಸಮಸ್ತ ಕೈಮಗ್ಗ ನೇಕಾರರ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ

ಆ) ಸರ್ಕಾರದ ಆದೇಶಗಳ ಸಂಖ್ಯೆ ಸಿಒ/58/ಸಿಎಲ್‌ಎಸ್/2007, ದಿ 16-4-2007, ಸಂಖ್ಯೆ ಸಿಒ/59/ಸಿಎಲ್‌ಎಸ್/2007, ದಿ 16-4-2007 ಮತ್ತು ಸಂಖ್ಯೆ ಸಿಒ/61/ಸಿಎಲ್‌ಎಸ್/2007, ದಿ 16-4-2007 ರಂತೆ ನೇಕಾರರು ಸಹಕಾರಿ ಕ್ಷೇತ್ರದ ಬ್ಯಾಂಕುಗಳಿಂದ ಪಡೆದ ಸಾಲ ಮತ್ತು ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನ ಮಾಡುವ ಬಗ್ಗೆ (ಷರುತ್ತಿಗಳಿಗೊಳಪಟ್ಟು)) ಆದೇಶ ಹೊರಡಿಸಲಾಗಿರುತ್ತದೆ